# ಲಿಂಗ ಅಸಮಾನತೆಯಿಂದ ಸಮಾನತೆಯೆಡೆಗೆ | 'ಸದ್ಭಾವನಾ ವಿದ್ಯಾಲಯ'ದ ಕಡೆಗೆ

ದೀಪ್ತಿ ಸಿಂಗ್ ರಾಥೋಡ್

ಸಮಾಜದಲ್ಲಿ ಪುರುಷರು ಮತ್ತು ಮಹಿಳೆಯರ ನಡುವೆ ಇರುವ ಅಸಮಾನತೆಯನ್ನು ಲಿಂಗ ಅಸಮಾನತೆಯು (Gender inequality) ಎತ್ತಿ ಹಿಡಿಯುತ್ತದೆ. ಈ ವಿಭಜನೆಯು ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿದ್ದು, 21ನೇ ಶತಮಾನದಲ್ಲಿಯೂ ಸಾಮಾಜಿಕ, ಆರ್ಥಿಕ, ರಾಜಕೀಯ, ವೈಜ್ಞಾನಿಕ, ಮನರಂಜನೆ ಮತ್ತು ಕ್ರೀಡಾ ಕ್ಷೇತ್ರಗಳಲ್ಲಿ ಇನ್ನೂ ಇದನ್ನು ನೋಡಬಹುದಾಗಿದೆ. ಮಹಿಳೆಯರ ವಿರುದ್ಧದ ತಾರತಮ್ಯವು ಲಿಂಗವನ್ನಾಧರಿಸಿ ತೆಗೆದುಕೊಳ್ಳುವ ಕ್ರಮಗಳು ಮತ್ತು ನಡವಳಿಕೆಗಳ ಪ್ರಮುಖ ಫಲಿತಾಂಶವಾಗಿದೆ. ಇದರಿಂದಾಗಿ ಹೆಣ್ಣು ಭ್ರೂಣ ಹತ್ಯೆಗಳು ಇಂದಿಗೂ ನಡೆಯುತ್ತಲೇ ಇವೆ. ಹಲವಾರು ಕಾರಣಗಳಿಂದಾಗಿ, ನೂರಾರು ಹುಡುಗಿಯರು ಇಂದಿಗೂ ಶಾಲೆಗೆ ಹೋಗುವ ಅವಕಾಶದಿಂದ ವಂಚಿತರಾಗಿದ್ದಾರೆ. ವರ್ಷಗಳು ಉರುಳಿದಂತೆ ಸಾಕಷ್ಟು ಬದಲಾವಣೆ ಕಂಡುಬಂದಿದ್ದರೂ ಮತ್ತು ಮಹಿಳೆಯರು ವಿವಿಧ ವೃತ್ತಿಗಳಲ್ಲಿ ಕೊಡುಗೆಗಳನ್ನು ನೀಡುತ್ತಿದ್ದರೂ, ಈ ಅಸಮತೋಲನವು ಸಮಾಜದ ಗಮನಾರ್ಹ ಭಾಗದ ಮೇಲೆ ಇನ್ನೂ ಪರಿಣಾಮ ಬೀರುತ್ತಿದೆ. ಇದರ ಪರಿಣಾಮವಾಗಿ, ಈಗಲೂ ಸಮಾಜದಲ್ಲಿ ನಾವು ನಡೆಸುವ ದಿನನಿತ್ಯದ ಸಂವಹನಗಳಲ್ಲಿ ಲಿಂಗ ತಾರತಮ್ಯವು ವ್ಯಾಪಕವಾಗಿದೆ–ಯಾದರೂ, ಅದು ನಮ್ಮನ್ನು ತಟ್ಟಿದಂತೆ ಕಾಣುವುದಿಲ್ಲ. ಈ ನಡವಳಿಕೆಗಳನ್ನು ಸಾಧ್ಯವಾದಷ್ಟು ಬೇಗ ಬದಲಾಯಿಸ–ಬೇಕಾಗಿದೆ; ಆಗ ಮಾತ್ರ ನಾವು ಸಾಂವಿಧಾನಿಕವಾಗಿ ಖಾತರಿಪಡಿಸಿದ ಮೂಲಭೂತ ಹಕ್ಕುಗಳ ನಿಜವಾದ ಮಹತ್ವವನ್ನು ನೋಡಲು ಮತ್ತು ನಿಜವಾದ ಸಮಾನತೆಯತ್ತ ಮುನ್ನಡೆಯನ್ನು ಸಾಧಿಸಲು ಸಾಧ್ಯವಾಗುತ್ತದೆ. ಲಿಂಗ ಅಸಮಾನತೆಯು ಹಲವಾರು ಸಣ್ಣ ಕ್ರಿಯೆಗಳ ಮತ್ತು ನಡವಳಿಕೆಗಳ ಪರಿಣಾಮವಾಗಿದೆ. ನಾವು ಎಲ್ಲಾ ವಿದ್ಯಾರ್ಥಿಗಳನ್ನು ಸಮಾನವಾಗಿ ಪರಿಗಣಿಸುತ್ತೇವೆ ಮತ್ತು ಲಿಂಗ ತಾರತಮ್ಯ ಮಾಡುವುದಿಲ್ಲ ಎಂದು ಅನೇಕ ಶಾಲೆಗಳು ಪ್ರತಿಪಾದಿಸುತ್ತವೆ. ಆದರೆ ನನ್ನ 12 ವರ್ಷಗಳ ಶಿಕ್ಷಕ ವೃತ್ತಿಯಲ್ಲಿ, ಶಾಲಾ ಹಂತದಲ್ಲಿ ಲಿಂಗ ಅಸಮಾನತೆಗಳನ್ನು ನಾನು ಕಣ್ಣಾರೆ ಕಂಡಿದ್ದೇನೆ ಮತ್ತು ಅನುಭವಿಸಿದ್ದೇನೆ ಕೂಡ.

ಒಂದು ದಿನ, ನನಗೆ ಒಬ್ಬ ವಿದ್ಯಾರ್ಥಿನಿ ಕಡೆಯಿಂದ ದೂರವಾಣಿ ಕರೆ ಬಂದಿತು. ಅವಳು ಕೆಲವು ಹಿಂದಿ ಪಠ್ಯದ ಪ್ರಶ್ನೆಗಳನ್ನು ಅರ್ಥ ಮಾಡಿಸಬೇಕೆಂದು ಕೇಳಿದಳು. ನಮ್ಮ ಫೋನಿನ ಸಂಭಾಷಣೆಯ ಮಧ್ಯದಲ್ಲಿ, ಅವಳು ತನ್ನ ಸಹೋದರ ಕೆಲಸದಿಂದ ಮನೆಗೆ ಹಿಂದಿರುಗಿರುವುದಾಗಿಯೂ ಮತ್ತು ಅವನಿಗೆ ಊಟ ಬಡಿಸಬೇಕಾಗಿರುವುದರಿಂದ ಸ್ವಲ್ಪ ಸಮಯ ನಮ್ಮ ಸಂಭಾಷಣೆಯನ್ನು ಸ್ಥಗಿತಗೊಳ್ಳುತ್ತೇನೆ ಎಂದು ಹೇಳಿದಳು. ಆಧುನಿಕ ಸಮಾಜದಲ್ಲಿ ಹುಡುಗಿಯರನ್ನು ಇನ್ನೂ ಮನೆಯ ಕೆಲಸಗಳಿಗೆ ಮಾತ್ರ ಸೀಮಿತವೆಂದು ಪರಿಗಣಿಸಲಾಗಿದೆಯೇ ಎಂದು ಇದು ನನ್ನನ್ನು ಪ್ರಶ್ನಿಸುವಂತೆ ಮಾಡಿತು. ಮನೆಯಲ್ಲಿ ಸಹೋದರಿ ಇದ್ದರೆ ಮತ್ತು ಸಹೋದರ ಹೊರಗಿನಿಂದ ಬಂದರೆ, ತಾಯಿಯ ಅನುಪಸ್ಥಿತಿಯಲ್ಲಿ, ಸಹೋದರಿಯೇ ಅವನಿಗೆ ಊಟ ಬಡಿಸಬೇಕೇ? ಮತ್ತು ತಾಯಂದಿರು ಮತ್ತು ಸಹೋದರಿಯರು ಮಾತ್ರ ಏಕೆ ಊಟವನ್ನು ಬಡಿಸಬೇಕು? ಚಿಕ್ಕಂದಿನಿಂದಲೇ, ಹುಡುಗರು ಮತ್ತು ಹುಡುಗಿಯರಿಗೆಂದೇ ವಿವಿಧ ಮನೆಕೆಲಸಗಳನ್ನು ನಿಗದಿಪಡಿಸಲಾಗಿದೆ.

ಭಾಷೆ, ಚಿತ್ರಗಳು ಮತ್ತು ಕಥೆಗಳ ಮೂಲಕ, ಮನೆಕೆಲಸಗಳ ವಿಭಜನೆಯು ಲಿಂಗವನ್ನು ಆಧರಿಸಿದೆ. ಈ ರೀತಿಯಾದ ವ್ಯತ್ಯಾಸವನ್ನು ಉತ್ತೇಜಿಸುವಲ್ಲಿ ಶಾಲೆಗಳು ಪ್ರಮುಖ ಪಾತ್ರವಹಿಸುತ್ತವೆ. ಮನೆ ಕೆಲಸವು ಕೇವಲ ಹೆಣ್ಣುಮಕ್ಕಳು ಮತ್ತು ಮಹಿಳೆಯರ ಜವಾಬ್ದಾರಿಯಾಗಿದ್ದು, ಮನೆಯ ಹೊರಗಿನ ಕೆಲಸವು ಹುಡುಗರು ಮತ್ತು ಪುರುಷರ ಜವಾಬ್ದಾರಿಯಾಗಿದೆ ಎಂಬುದು ನಮ್ಮ ಬಲವಾದ ನಂಬಿಕೆಯಾಗಿದೆ. ಇಂತಹ ನಂಬಿಕೆಗಳ ಬಗ್ಗೆ ನಾವು ಆಳವಾದ ಚರ್ಚೆಗಳನ್ನು ಕೈಗೊಂಡರೆ ಮತ್ತು ಶಾಲಾ ಕೆಲಸ ಕಾರ್ಯಕ್ರಮಗಳಲ್ಲಿ ಹುಡುಗ ಮತ್ತು ಹುಡುಗಿಯರ ಭಾಗವಹಿಸುವಿಕೆಯನ್ನು ಖಚಿತಪಡಿಸಿದರೆ ಮಾತ್ರ ಇದರಲ್ಲಿ ಬದಲಾವಣೆ ಕಾಣಲು ಪ್ರಾರಂಭವಾಗುತ್ತದೆ.

ಹುಡುಗರು ಮತ್ತು ಹುಡುಗಿಯರನ್ನು ಅವರ ಕನಸುಗಳ ಬಗ್ಗೆ ತರಗತಿಯಲ್ಲಿ ಯಾವಾಗ ಕೇಳಿದರೂ, ಹುಡುಗರು ಸೇನೆ ಅಥವಾ ಪೊಲೀಸ್ ಪಡೆಗೆ ಸೇರುವುದಾಗಿಯೂ ಅಥವಾ ವೈದ್ಯರಾಗುವ ತಮ್ಮ ಇಚ್ಛೆಯನ್ನು ವ್ಯಕ್ತಪಡಿಸುತ್ತಾರೆ. ಆದರೆ, ಹೆಚ್ಚಿನ ಸಂಖ್ಯೆಯ ಹುಡುಗಿಯರು ಬೋಧನಾ ವೃತ್ತಿಯನ್ನು ಆಯ್ಕೆ ಮಾಡಿಕೊಳ್ಳುತ್ತಾರೆ ಅಥವಾ ಮುಂದಿನ ದಿನಗಳಲ್ಲಿ ಅವರು ಕೇವಲ ಮನೆಯ ಕೆಲಸವನ್ನು ಮಾತ್ರ ಮಾಡಬೇಕಾದ ಅನಿವಾರ್ಯತೆ ಬಂದೊದಗುವುದರಿಂದ ಅವರು ತಮ್ಮ ಶಿಕ್ಷಣವನ್ನು ಏಕೆ ಮುಂದುವರಿಸಬೇಕು? ಎಂದು ಸಹ ಪ್ರಶ್ನಿಸುತ್ತಾರೆ.

ನಾನು ನನ್ನ ವಿದ್ಯಾರ್ಥಿಗಳನ್ನು ಅವರ ವೃತ್ತಿಯ ಬಗ್ಗೆ ಕೇಳಿದಾಗಲೆಲ್ಲಾ, ಹೆಚ್ಚಿನ ಹುಡುಗಿಯರು ಇದೇ ರೀತಿಯ ಉತ್ತರಗಳನ್ನು ನೀಡುತ್ತಾರೆ. ಇಂದು ಮಹಿಳೆಯರು ಪುರುಷರೊಂದಿಗೆ ಹೊರಗೆ ಕೆಲಸ ಮಾಡಲು ಹೋದರೂ, ಸಾಮಾಜಿಕ ಆಚರಣೆಗಳಿಂದಾಗಿ, ಕೆಲವು ವೃತ್ತಿಗಳು ಮಹಿಳೆಯರಿಗೆ ಮಾತ್ರ ಸೂಕ್ತವೆಂದು ಪರಿಗಣಿಸಲ್ಪಟ್ಟಿವೆ, ಅದರಲ್ಲಿ

ಶಿಕ್ಷಕ ವೃತ್ತಿಯೂ ಸಹ ಒಂದಾಗಿದೆ ಎಂದು ಯೋಚಿಸಲು ಇದು ನಮ್ಮನ್ನು ಬಲವಂತಪಡಿಸುತ್ತದೆ. ನಾನು ಸಹ ಒಬ್ಬ ಶಿಕ್ಷಕಿ. ಕುಟುಂಬದವರೊಂದಿಗೆಯೋ ಅಥವಾ ಇತರರೊಂದಿಗೆಯೋ ಸಾಮಾನ್ಯವಾಗಿ ಮಾತನಾಡುವ ಸಂದರ್ಭದಲ್ಲಿ, ನಾನು ವೃತ್ತಿಯಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದೇನೆ ಎಂದು ಹೇಳಿದಾಗಲೆಲ್ಲಾ, ಎಲ್ಲರೂ ಶಿಕ್ಷಕರ ವೃತ್ತಿಯು ಮಹಿಳೆಯರಿಗೆ ಉತ್ತಮವಾದ ಕೆಲಸ ಎಂದು ನನ್ನನ್ನು ಹೊಗಳುತ್ತಾರೆ ಏಕೆಂದರೆ, ಈ ವೃತ್ತಿಯು ನಿಗದಿತ ಸಮಯವನ್ನು ಹೊಂದಿರುವ ಕಾರಣದಿಂದಾಗಿ, ತಮ್ಮ ಕೆಲಸದ ಜೊತೆಗೆ, ಅವರು ತಮ್ಮ ಕುಟುಂಬಗಳಿಗೂ ಸಹ ಸಮಯವನ್ನು ನೀಡಬಹುದೆಂದು. ಮಹಿಳೆಯರು ಯಾವ ರೀತಿಯ ಕೆಲಸಗಳನ್ನು ಮಾಡಬೇಕೆಂದು ಸಮಾಜವು ಈಗಾಗಲೇ ನಿರ್ಧರಿಸಿರುವುದರಿಂದ ಹೆಣ್ಣುಮಕ್ಕಳು ಈ ವೃತ್ತಿಗಳನ್ನು ಮೀರಿ ಯೋಚಿಸಲು ಸಾಧ್ಯವಾವಿಲ್ಲ-ದಂತಾಗಿದೆ. ಶಾಲೆಗಳಲ್ಲಿ ಲಿಂಗ ತಾರತಮ್ಯವನ್ನು ಉತ್ತೇಜಿಸುವ ಆಚರಣೆಗಳ ಕೆಲವು ಉದಾಹರಣೆಗಳು ಈ ಕೆಳಕಂಡಂತಿವೆ:

- ಲಿಂಗ ಅಸಮಾನತೆಯನ್ನು ಉತ್ತೇಜಿಸುವಂತಹ ಭಾಷೆಯನ್ನು ಬಳಕೆ ಮಾಡುವುದು. ಒಬ್ಬ ಹುಡುಗ ಸಹಜವಾಗಿ ಅಳುತ್ತಿದ್ದರೆ 'ನೀನೇಕೆ ಹುಡುಗಿಯರಂತೆ ಅಳುತ್ತಿದ್ದೀಯಾ?' ಎಂದು ಕೇಳುವುದು. ಇನ್ನು, ಕೆಲವು ಹುಡುಗರು ಸ್ವಾಭಾವಿಕವಾಗಿಯೇ ನಾಚಿಕೆಯ ಸ್ವಭಾವದವರಾಗಿರುತ್ತಾರೆ ಹಾಗೂ ಅವರಿಗೆಂದೇ ನಿಯೋಜಿಸಲಾದ ಕೆಲವು ಕೆಲಸಗಳನ್ನು ಮಾಡಲು ಹೆಣಗಾಡುತ್ತಿರುತ್ತಾರೆ. ಅಂತಹ ಹುಡುಗರಿಗೆ 'ಹೆಣ್ಣುಮಕ್ಕಳಂತೆ ನೀನೇಕೆ ಸಂಕೋಚಪಡುತ್ತೀಯಾ?' ಎಂದು ಮೂದಲಿಸುವುದು.

- ತರಗತಿಯಲ್ಲಿ, ಪ್ರಾಥಮಿಕ ಶಾಲೆಯಿಂದಲೇ ಹುಡುಗರು ಮತ್ತು ಹುಡುಗಿಯರು ಪ್ರತ್ಯೇಕವಾಗಿ ಕುಳಿತುಕೊಳ್ಳಲು ಆಸನ ವ್ಯವಸ್ಥೆಯನ್ನು ಮಾಡಲಾಗಿದೆ. ಚಿಕ್ಕ ವಯಸ್ಸಿನಲ್ಲಿ ಅವರ ನಡವಳಿಕೆಯಲ್ಲಿನ ವ್ಯತ್ಯಾಸವು ಹೆಚ್ಚು ಗೋಚರವಾಗುವುದಿಲ್ಲ, ಆದರೆ ಅವರು ಉನ್ನತ ಪ್ರಾಥಮಿಕ ತರಗತಿಯನ್ನು ತಲುಪುವ ಹೊತ್ತಿಗೆ, ಅಂತಹ ವ್ಯತ್ಯಾಸವನ್ನು ಸ್ಪಷ್ಟವಾಗಿ ಕಾಣಬಹುದಾಗಿದೆ.

- ಶಾಲೆಯಲ್ಲಿ ಬೆಳಗ್ಗೆ ನಡೆಸುವ ಅಸೆಂಬ್ಲಿಯಲ್ಲಿ ಹುಡುಗರು ಮತ್ತು ಹುಡುಗಿಯರಿಗಾಗಿಯೇ ಪ್ರತ್ಯೇಕ ಸಾಲುಗಳಿವೆ.

- ಎಲ್ಲರನ್ನು ಸರತಿ ಸಾಲಿನಲ್ಲಿ ನಿಲ್ಲಿಸಿದಾಗ, ಹುಡುಗಿಯರನ್ನು ಯಾವಾಗಲೂ ಮುಂದೆ ನಿಲ್ಲಿಸುತ್ತಾರೆ ಮತ್ತು ಹುಡುಗರು ಅವರ ಹಿಂದೆ ನಿಲ್ಲುತ್ತಾರೆ.

- ಸಾಂಪ್ರದಾಯಿಕವಾಗಿ, ಬೆಳಗ್ಗಿನ ಅಸೆಂಬ್ಲಿಯ ನೇತೃತ್ವವನ್ನು ಸಾಮಾನ್ಯವಾಗಿ ಹುಡುಗಿಯರಿಗೆ ವಹಿಸಲಾಗುತ್ತದೆ.

- ಕಲೆ, ಗಾಯನ, ರಂಗೋಲಿ ಮತ್ತು ಅಲಂಕಾರದಂತಹ ಚಟುವಟಿಕೆಗಳನ್ನು ಹುಡುಗಿಯರಿಗೆ ವಹಿಸಿದರೆ, ಹುಡುಗರು ಭಾಷಣ, ಚರ್ಚೆ ಮತ್ತು ಕವನ ವಾಚನದ ಕಡೆಗೆ ಹೆಚ್ಚು ಒಲವು ತೋರುತ್ತಾರೆ.

- ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಹೆಣ್ಣುಮಕ್ಕಳೇ ಹೆಚ್ಚಾಗಿ ಭಾಗವಹಿಸುತ್ತಾರೆ.

- ಓಟ, ಕ್ರಿಕೆಟ್ ಮತ್ತು ಫುಟ್ಬಾಲ್‌ನಂತಹ ಕ್ರೀಡೆಗಳಲ್ಲಿ ಹುಡುಗರು ಭಾಗವಹಿಸಿದರೆ, ಹುಡುಗಿಯರಿಗೆ ಕೇರಂ, ಲೂಡೋ, ಖೋ-ಖೋ, ಕಬಡ್ಡಿ ಮತ್ತು ಬ್ಯಾಡ್ಮಿಂಟನ್-ನಂತಹ ಆಟಗಳನ್ನು ಆಯೋಜಿಸಲಾಗುತ್ತದೆ.

- ತರಗತಿಯನ್ನು ಶುಚಿಗೊಳಿಸುವುದು, ಕಪ್ಪುಹಲಗೆಯನ್ನು ಸ್ವಚ್ಛಗೊಳಿಸುವುದು ಮತ್ತು ಇತರೆ ಹುಡುಗಿಯರನ್ನು ಸುಮ್ಮನಿರಿಸುವುದು ಇತ್ಯಾದಿ ಕೆಲಸಗಳನ್ನು ಹುಡುಗಿಯರಿಗೆ ವಹಿಸಿದರೆ, ಹುಡುಗರಿಗೆ ಇಡೀ ತರಗತಿಯನ್ನು ಶಾಂತಚಿತ್ತದಿಂದಿಡುವುದು, ಬಕೆಟ್‌ನಿಂದ ನೀರು ಎತ್ತಿ ತರುವುದು, ಟೇಬಲ್ ಬೆಂಚುಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಎತ್ತಿ ಇಡುವುದು ಅಥವಾ ಅವುಗಳನ್ನು ಅಲ್ಲಿಂದ ತೆಗೆಯುವುದು ಇತ್ಯಾದಿ ಜವಾಬ್ದಾರಿಗಳನ್ನು ವಹಿಸಲಾಗುತ್ತದೆ.

ನಾನು ಬನಾರಿಯ ಸರ್ಕಾರಿ ಮಾಧ್ಯಮಿಕ ಶಾಲೆಗೆ ಸೇರಿಕೊಂಡಾಗ, ಲಿಂಗ ಅಸಮಾನತೆಯನ್ನು ಉತ್ತೇಜಿಸಲು ತಿಳಿದೋ ಅಥವಾ ತಿಳಿಯದೆಯೋ ಕೊಡುಗೆ ನೀಡುತ್ತಿರುವ ಅನೇಕ ವಿಷಯಗಳು ನನ್ನ ಕಣ್ಣಿಗೆ ಬಿದ್ದವು. ನಾವು ಸ್ವಲ್ಪ ಯೋಚಿಸಿದರೆ ಶಾಲೆಯಲ್ಲಿನ ಈ ಅಸಮಾನತೆಯನ್ನು ಹೋಗಲಾಡಿಸಲು ಪ್ರಯತ್ನ ಮಾಡಬಹುದು ಎನಿಸಿತು. ನಾನು ಶಿಕ್ಷಕಿಯಾಗಿರುವುದರಿಂದ, ಇಂತಹ ಅಸಮಾನತೆಯ ಅಂತರವನ್ನು ನಿವಾರಿಸುವ ನಿಟ್ಟಿನಲ್ಲಿ ಮಹತ್ವದ ಪಾತ್ರ ವಹಿಸುವಂತಹ ಬೋಧನ ವಿಧಾನವನ್ನು ಬಳಸಬೇಕಿರುವುದು ನನ್ನ ಕರ್ತವ್ಯವೂ ಆಗಿದೆ.

- ಕೆಲವು ಕ್ರೀಡೆಗಳು ಹುಡುಗಿಯರಿಗೆ ಮಾತ್ರ ಅಥವಾ ಕೆಲವು ಹುಡುಗರಿಗೆ ಮಾತ್ರ ಎಂಬ ಗಾಢನಂಬಿಕೆಯನ್ನು ಮುರಿಯಲು ನಾವು, ಇಡೀ ಸಿಬ್ಬಂದಿಯೊಂದಿಗೆ ಕೆಲವು ಸಣ್ಣ ಪ್ರಯತ್ನಗಳನ್ನು ಮಾಡಿದ್ದೇವೆ. ನಾವು ಹುಡುಗಿಯರಿಗೆ ಹುಡುಗರ ಜೊತೆಯಲ್ಲಿ ಕ್ರಿಕೆಟ್ ಮತ್ತು ಫುಟ್ಬಾಲ್ ಆಡುವ ಅವಕಾಶವನ್ನು ಒದಗಿಸಿದ್ದೇವೆ.

- ಮಧ್ಯಾಹ್ನದ ಊಟವನ್ನು ಎಲ್ಲರೂ ಒಟ್ಟಿಗೆ ಕುಳಿತು ಮಾಡುವ ವ್ಯವಸ್ಥೆಯನ್ನು ಮಾಡಲಾಗಿದ್ದು, ಊಟ ಬಡಿಸುವ ಕೆಲಸದಲ್ಲಿ ಹುಡುಗರೂ ಕೂಡ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ.

- ಶಾಲೆಯ ಹಿಂಭಾಗದಲ್ಲಿರುವ ಖಾಲಿ ಜಾಗದಲ್ಲಿ ಒಂದು ಉದ್ಯಾನವನವನ್ನು ಬೆಳೆಸಬೇಕೆಂದು ನಾವು ನಿರ್ಧರಿಸಿದೆವು. ಆ ಜಾಗವು ತುಂಬಾ ಗಲೀಜಿನಿಂದ ಕೂಡಿದ್ದು – ಮಿತಿಮೀರಿ ಬೆಳೆದ ಕಳೆ ಕಸದಿಂದ ತುಂಬಿತ್ತು. ಹಾಗಾಗಿ ಶಿಕ್ಷಕರು ಮತ್ತು ಮಕ್ಕಳೆಲ್ಲರೂ ಸೇರಿ ಆ ಜಾಗವನ್ನು ಶುಚಿಗೊಳಿಸಿದೆವು. ಈ ಕೆಲಸದಲ್ಲಿ ಮಹಿಳಾ ಮತ್ತು ಪುರುಷ ಶಿಕ್ಷಕರಿಬ್ಬರೂ ಸಮಾನ ಜವಾಬ್ದಾರಿಯನ್ನು ವಹಿಸಿಕೊಂಡರು. ಇದರಿಂದ ಮಕ್ಕಳೂ ಪ್ರೇರಿತರಾಗಿ ಹುಡುಗರು ಮತ್ತು ಹುಡುಗಿಯರು ಇಬ್ಬರೂ ಸಮಾನವಾಗಿ ಭಾಗವಹಿಸಿದರು.

- ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಹೆಚ್ಚಾಗಿ ಹುಡುಗಿಯರು ಮಾತ್ರ ನೃತ್ಯದಲ್ಲಿ ಭಾಗವಹಿಸುವುದನ್ನು ಗಮನಿಸಿದ್ದೇನೆ. ಹುಡುಗರನ್ನೂ ನೃತ್ಯದಲ್ಲಿ ತೊಡಗಿಸುವ ಪ್ರಯತ್ನ ಆರಂಭಿಸಿದ್ದೇನೆ. ನೃತ್ಯದಲ್ಲಿ ಭಾಗವಹಿಸುವಂತೆ ಅವರನ್ನು ಎಂದಿಗೂ ಕರೆಯದ ಕಾರಣ ಅವರು ನೃತ್ಯದ ಬಗ್ಗೆ ನಾಚಿಕೆಪಡುತ್ತಾರೆ ಎಂದು ನನಗೆ ತಿಳಿದಿತ್ತು. ಹಾಗಾಗಿ ನಾನು ಅವರೊಂದಿಗೆ ಇದರ ಬಗ್ಗೆ ಮಾತನಾಡಿ ನೃತ್ಯವನ್ನು ಕೇವಲ ಒಂದು ಕಲೆಯಾಗಿ ನೋಡಬೇಕು ಹಾಗೂ ತಮ್ಮಲ್ಲಿರುವ ಕೌಶಲವನ್ನು ಎಲ್ಲರಿಗೂ ತೋರಿಸಬೇಕು ಎಂದು ತಿಳಿಹೇಳಿದೆನು. ನಂತರ, ಹುಡುಗರು ನೃತ್ಯ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಪ್ರಾರಂಭಿಸಿದರು. ಕೆಲವು ಹುಡುಗರು ನಾನು ಅವರ ಶಾಲೆಗೆ ಶಿಕ್ಷಕಿಯಾಗಿ ಬರದೇ ಇದ್ದಿದ್ದರೆ, ಅವರಿಗೆ ನೃತ್ಯದಲ್ಲಿ ಭಾಗವಹಿಸುವ ಅವಕಾಶವೇ ಸಿಗುತ್ತಿರಲಿಲ್ಲ ಎಂದು ಹೇಳುತ್ತಿದ್ದರು.

- ತರಗತಿಯಲ್ಲೂ, ಲಿಂಗ ಅಸಮಾನತೆಯನ್ನು ಹೋಗಲಾಡಿಸಲು ನಾನು ಕೆಲವು ಮಾರ್ಪಾಡುಗಳನ್ನು ಮಾಡಿದ್ದೇನೆ: ಹುಡುಗರು ಮತ್ತು ಹುಡುಗಿಯರಿಗಾಗಿ ತರಗತಿಯಲ್ಲಿ ಪ್ರಜಾಪ್ರಭುತ್ವ ಮಾದರಿಯ ಆಸನದ ವ್ಯವಸ್ಥೆ ಮಾಡಿರುವುದು


- ಸಹಪಾಠಿಗಳೊಂದಿಗೆ ಕೂಡಿ ಕಲಿಯುವ ಸಮಯದಲ್ಲಿ, ಗುಂಪು ಕಲಿಕೆ, ಚಟುವಟಿಕೆಗಳಿಗಾಗಿ ಹುಡುಗರು ಮತ್ತು ಹುಡುಗಿಯರನ್ನು ಜೋಡಿಗಳಾಗಿ ಅಥವಾ ಗುಂಪು–ಗಳನ್ನಾಗಿ ರಚಿಸುವುದು

- ಭಾಷೆಯನ್ನು ಕಲಿಸುವಾಗ ಹುಡುಗರು ಮತ್ತು ಹುಡುಗಿಯರನ್ನು ಪಾತ್ರಾಭಿನಯಗಳಲ್ಲಿ ಇತ್ಯಾದಿ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವಂತೆ ಮಾಡುವುದು

- ತರಗತಿಗಳನ್ನು ಸ್ವಚ್ಛಗೊಳಿಸುವ ಜವಾಬ್ದಾರಿಯನ್ನು ಹುಡುಗರು ಮತ್ತು ಹುಡುಗಿಯರಿಗೆ ಇಬ್ಬರಿಗೂ ನೀಡುವುದು

- ವಿಜ್ಞಾನ ಮಾದರಿಗಳನ್ನು ತಯಾರಿಸುವಲ್ಲಿ ಹುಡುಗಿಯರನ್ನು ತೊಡಗಿಸಿಕೊಳ್ಳುವುದು
- ಅಸೆಂಬ್ಲಿ ಕಾರ್ಯಕ್ರಮಗಳಲ್ಲಿ ಹುಡುಗರು ಮತ್ತು ಹುಡುಗಿಯರಿಬ್ಬರೂ ಸಮಾನವಾಗಿ ಭಾಗವಹಿಸುವುದನ್ನು ಖಚಿತಪಡಿಸಿಕೊಳ್ಳುವುದು

- ಒಂದು ಹುಡುಗಿಯಾಗಿರುವುದು ಅಥವಾ ಹುಡುಗನಾಗಿ–ರುವುದರ ಅರ್ಥವೇನು ಎಂದು ಅವರೊಂದಿಗೆ ಮಾತನಾಡುವುದು; ಕೆಲಸಗಳ ವಿಷಯದಲ್ಲಿ ಅವರ ಅಭಿಪ್ರಾಯಗಳನ್ನು ವಿಂಗಡಿಸುವುದು ಮತ್ತು ನನ್ನ ದೃಷ್ಟಿಕೋನವನ್ನು ಅವರೊಂದಿಗೆ ಹಂಚಿಕೊಳ್ಳುವುದು; ಮನೆಯಲ್ಲಿ ಮನೆಕೆಲಸಗಳಲ್ಲಿ ತಮ್ಮ ತಾಯಂದಿರಿಗೆ ಸಹಾಯ ಮಾಡಲು ಹುಡುಗರಿಗೆ ಹೇಳುವುದು.




**ದೀಪ್ತಿ ಸಿಂಗ್ ರಾಥೋಡ್** ಅವರು ಬನಾರಿಯ (ಜಂಜ್ಗೀರ್ ಜಿಲ್ಲೆ, ಛತ್ತೀಸ್ಗಢ) ಸರ್ಕಾರಿ ಮಾಧ್ಯಮಿಕ ಶಾಲೆಯಲ್ಲಿ ಬೋಧಿಸುತ್ತಿದ್ದಾರೆ. ಬಿ. ಎಡ್, (B Ed,)ನೊಂದಿಗೆ ಕಲಾ ಪದವೀಧರರಾಗಿರುವ ಅವರು ಕಾನೂನಿನಲ್ಲಿ ಪದವಿಯನ್ನೂ ಸಹ ಪಡೆದಿದ್ದಾರೆ. ಬೋಧನೆಯು ಅವರ ಮೆಚ್ಚಿನ ಉದ್ಯೋಗವಾಗಿದೆ ಹಾಗೂ ವಿದ್ಯಾರ್ಥಿಗಳೊಂದಿಗೆ ಸಂವಹನ ನಡೆಸುವುದು ಮತ್ತು ಅವರನ್ನು ಅರ್ಥಮಾಡಿಕೊಳ್ಳುವುದು, ಅವರಿಗೆ ಬೋಧಿಸುವುದು ನೆಚ್ಚಿನ ಹವ್ಯಾಸಗಳಾಗಿವೆ. ಇದಲ್ಲದೆ, ಅವರು ಹಾಡುವುದು, ನೃತ್ಯ ಮಾಡುವುದು ಮತ್ತು ಪೇಂಟಿಂಗ್ ಮಾಡುವುದನ್ನು ಸಹ ಹೆಚ್ಚು ಇಷ್ಟಪಡುತ್ತಾರೆ. ಅವರನ್ನು dipti.rathore87@gmail.com ಮೂಲಕ ಸಂಪರ್ಕಿಸಬಹುದು.



ಅನುವಾದ: **ಲತಾ ಕೆ.ಸಿ.** | ಪರಿಶೀಲನೆ: **ನಾಗಮಣಿ ಎಸ್. ಎನ್.**